# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1017 (1113) |
| ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.03.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2020-21ನೇ ಸಾಲಿನಲ್ಲಿ ಅನುದಾನರಹಿತ ಖಾಸಗಿ ಶಾಲೆಗಳಿಂದ ಸುಮಾರು 345.80 ಕೋಟಿ ರೂ.ಗಳ ಹೆಚ್ಚುವರಿ ಶಾಲಾ ಶುಲ್ಕ ಸಂಗ್ರಹಿಸಿದ್ದು, ನ್ಯಾಯಾಲಯದ ಆದೇಶದಂತೆ 2019-20 ರಲ್ಲಿ ಸಂಗ್ರಹಿಸಲಾದ ಶಾಲಾ ಶುಲ್ಕದಲ್ಲಿ ಶೇ.85 ರಷ್ಟು ಶುಲ್ಕವನ್ನು 2020-21ನೇ ಸಾಲಿನಲ್ಲಿ ಸಂಗ್ರಹಿಸಲು ಆದೇಶವಿದ್ದರೂ ಅದನ್ನು ಉಲ್ಲಂಘಿಸಿ ಹೆಚ್ಚುವರಿ ಶಾಲೆ ಶುಲ್ಕ ಸಂಗ್ರಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ. ಈ ಶಾಲೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಇವರು ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ಬಗ್ಗೆ 2017 ರಿಂದ 2022ರವರೆಗಿನ ಅವಧಿಗೆ ಸಂಬಂಧಿಸಿದಂತೆ ನೀಡಿದ 2024ರ ವರದಿಯಲ್ಲಿನ ಕಂಡಿಕೆ 6.9.3 ರ ಅನುಬಂಧ-6.2 ರಂತೆ ಮಾನ್ಯ ಉಚ್ಚ ನ್ಯಾಯಾಲಯದ WP No-4818/2021ರ ತೀರ್ಪನ್ನು ಉಲ್ಲಂಘಿಸಿ 2020-21ನೇ ಸಾಲಿನಲ್ಲಿ ಅನುದಾನರಹಿತ ಖಾಸಗಿ ಶಾಲೆಗಳಿಂದ ಸುಮಾರು 345.80 ಕೋಟಿ ರೂ. ಗಳ ಹೆಚ್ಚುವರಿ ಶಾಲಾ ಶುಲ್ಕ ಸಂಗ್ರಹಿಸಿರುವುದು ಗಮನಕ್ಕೆ ಬಂದಿರುತ್ತದೆ.<br><br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಸುತ್ತೋಲೆ ಸಂಖ್ಯೆ : ಸಿ7(2) ಪ್ರಾಶಿಅ/ಇತರೆ/80/2020-21 ದಿನಾಂಕ:15.11.2021ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಖಾಸಗಿ ಅನುದಾನರಹಿತ ಶಾಲೆಗಳು 2019-20ನೇ ಸಾಲಿನಲ್ಲಿ ಪಡೆದ ಬೋಧನಾ ಶುಲ್ಕದ ಶೇ.85 ರಷ್ಟನ್ನು ಮಾತ್ರ ಪಡೆಯಲು ಸೂಚನೆ ನೀಡಲಾಗಿರುತ್ತದೆ. ಮುಂದುವರೆದು, ಈ ಸಂಬಂಧ ಜಿಲ್ಲಾವಾರು ಅಧಿಕಾರಯುಕ್ತ ಸಮಿತಿಯನ್ನು ನಿಯೋಜಿಸಲಾಗಿರುತ್ತದೆ.<br>2020-21ನೇ ಸಾಲಿನ ಶುಲ್ಕ ಪಡೆಯುವ ಕುರಿತಂತೆ ನಿಯೋಜಿಸಲಾಗಿದ್ದ ಅಧಿಕಾರಯುಕ್ತ ಸಮಿತಿಯ ಮೂಲಕ ವರದಿಯ ಅನುಬಂಧ-6.2 ರಂತೆ ಜಿಲ್ಲಾವಾರು ಹೆಚ್ಚುವರಿ ಶುಲ್ಕ ಪಡೆದ ಶಾಲೆಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಆ) | ಇದೇ ನ್ಯಾಯಾಲಯದ ಆದೇಶದಲ್ಲಿ 2020-21ನೇ ಸಾಲಿನ ಆರ್.ಟಿ.ಈ (Right to | ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಇವರ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ |

| | | |
|---|---|---|
| | Education) ಯೋಜನೆಯಡಿ ಅನುದಾನರಹಿತ ಶಾಲೆಗಳಿಗೆ ಪಾವತಿಸಲಾಗುತ್ತಿದ್ದ ಶುಲ್ಕದಲ್ಲಿ ಶೇ.15 ರಷ್ಟು ರಿಯಾಯಿತಿ ನೀಡಲು ಆದೇಶಿಸಿದರೂ, ಅನುದಾನರಹಿತ ಶಾಲೆಗಳು ಸರ್ಕಾರಕ್ಕೆ ಹೆಚ್ಚುವರಿ ಶುಲ್ಕವನ್ನು ಕ್ಲೈಮ್ ಮಾಡಿ 7.07 ಕೋಟಿ ರೂ.ಗಳ ಮೊತ್ತ ಪಡೆದಿರುತ್ತಾರೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಈ ಶಾಲೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಸಂಸ್ಥೆಗಳ ಕಾರ್ಯವೈಖರಿಯ ಬಗ್ಗೆ 2017 ರಿಂದ 2022ರವರೆಗಿನ ಅವಧಿಗೆ ಸಂಬಂಧಿಸಿದಂತೆ ನೀಡಿದ 2024ರ ವರದಿಯಲ್ಲಿನ ಕಂಡಿಕೆ 6.9.2 ರ ಅನುಬಂಧ-6.1 ರಂತೆ ಮಾನ್ಯ ಉಚ್ಚ ನ್ಯಾಯಾಲಯದ WP No-4818/2021 ನ ತೀರ್ಪನ್ನು ಉಲ್ಲಂಘಿಸಿ 2020-21ನೇ ಸಾಲಿನಲ್ಲಿ ಅನುದಾನರಹಿತ ಖಾಸಗಿ ಶಾಲೆಗಳು 2019-20ರಲ್ಲಿ ಪಡೆದಿದ್ದ ಬೋಧನಾ ಶುಲ್ಕದ ಶೇ.85 ಕ್ಕಿಂತ ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವ ಕಾರಣದಿಂದ ಅನುದಾನರಹಿತ ಶಾಲೆಗಳು 7.07 ಕೋಟಿ ರೂ.ಗಳ ಹೆಚ್ಚುವರಿ ಶುಲ್ಕವನ್ನು ಕ್ಲೈಮ್ ಮಾಡಿರುವುದು ಗಮನಕ್ಕೆ ಬಂದಿರುತ್ತದೆ.<br><br>ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ:ಸಿ7(8)ಆರ್.ಟಿ.ಇ/ಶು.ಮ/ತಂ.ಬಿ/2021-22 ದಿನಾಂಕ: 23.02.2022 ರ ಸುತ್ತೋಲೆಯಲ್ಲಿ 2021-22ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಬೇಡಿಕೆಗಳಲ್ಲಿ 2020-21ನೇ ಸಾಲಿನಲ್ಲಿ ಆರ್.ಟಿ.ಇ.ಯೇತರ ಮಕ್ಕಳಿಂದ 2019-20ನೇ ಸಾಲಿನಲ್ಲಿ ಪಡೆದ ಬೋಧನಾ ಶುಲ್ಕದಲ್ಲಿ ಶೇಕಡಾ 85% ರಷ್ಟನ್ನು ಪಡೆದಿರುವ ಶುಲ್ಕವನ್ನು ನಮೂದಿಸಿರುವ ಬಗ್ಗೆ ಪರಿಶೀಲನೆ ಮಾಡಿ ಅದಕ್ಕಿಂತ ಹೆಚ್ಚುವರಿ ಶುಲ್ಕ ದಾಖಲಿಸಿದಲ್ಲಿ ಅಂತಹ ಶುಲ್ಕವನ್ನು ಪರಿಷ್ಕರಿಸಿ ಅರ್ಹ ಶುಲ್ಕವನ್ನು ಮಾತ್ರ ನಮೂದು ಮಾಡಲು ಅಗತ್ಯ ಕ್ರಮಕೈಗೊಳ್ಳಲು ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಆದಾಗ್ಯೂ ವರದಿಯ ಅನುಬಂಧ-6.1 ರಂತೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಶೇ.85 ಕ್ಕಿಂತ ಹೆಚ್ಚು ಶುಲ್ಕವನ್ನು ವಸೂಲು ಮಾಡಿ, ಅದರಂತೆ ಶುಲ್ಕ ಮರುಪಾವತಿಗೆ ಪ್ರಸ್ತಾವನೆ ಸಲ್ಲಿಸಿ ಹೆಚ್ಚುವರಿಯಾಗಿ ರೂ.7.07 ಕೋಟಿಗಳ ಶುಲ್ಕ ಮರುಪಾವತಿ ಮೊತ್ತ ಪಡೆದಿರುವ ಶಾಲೆಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |
| ಇ) | ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು? | ಮಾನ್ಯ ಉಚ್ಚ ನ್ಯಾಯಾಲಯದ WP No-4818/2021 ನ ತೀರ್ಪು, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಸುತ್ತೋಲೆ ಸಂಖ್ಯೆ: 27(2)ಪ್ರಾಶಿಅ/ ಇತರೆ/80/2020-21 ದಿನಾಂಕ 15.11.2021 ಹಾಗೂ ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ:ಸಿ7(8)ಆರ್.ಟಿ.ಇ/ |

| | | |
|---|---|---|
| | | ಶು.ಮ/ತಂ.ಬಿ/2021–22 ದಿನಾಂಕ:23.02.2022 ಗಳಲ್ಲಿ ನೀಡಿರುವ ನಿರ್ದೇಶನಗಳನ್ನು ಉಲ್ಲಂಘಿಸಿ ಖಾಸಗಿ ಅನುದಾನರಹಿತ ಶಾಲೆಗಳಿಗೆ ಹೆಚ್ಚುವರಿಯಾಗಿ ರೂ.7.07 ಕೋಟಿಗಳ ಆರ್.ಟಿ.ಇ. ಶುಲ್ಕ ಮರುಪಾವತಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಇಪಿ 117 ಪಿಎಂಸಿ 2025

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು